# ರಾಮಕೃಷ್ಣ ಸುದ್ದಿ ಸಂಚಯ

**ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು**

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com    Email : ho@ramakrishnacredit.com

CELEBRATING 25 years 1994-2019 SILVER JUBILEE TREASURY OF TRUST & SERVICE

ಸಂಪುಟ : V    ಸಂಚಿಕೆ : 3    ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ    ಅಕ್ಟೋಬರ್-ಡಿಸೆಂಬರ್ 2019




ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

## ಅಧ್ಯಕ್ಷರ ಮಾತು

**ಎಲ್ಲರಿಗೂ 2020ನೇ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.**

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿಯು 2019ನೇ ಸಾಲಿನಲ್ಲಿ ಅತ್ಯುತ್ತಮ ಪ್ರಗತಿಯನ್ನು ತೋರಿಸಿದೆ ಎಂದು ತಮಗೆಲ್ಲರಿಗೂ ತಿಳಿಯಪಡಿಸಲು ಬಹಳ ಸಂತೋಷಪಡುತ್ತೇನೆ.

**31.12.2019 ಸಂಘದ ವ್ಯವಹಾರದ ಪಕ್ಷಿನೋಟ**

| ಕ್ರ. ಸಂ. | ಕಾರ್ಯ ವಿಭಾಗ | ಡಿಸೆಂಬರ್ 2018ಕ್ಕೆ ಇದ್ದಂತೆ | ಡಿಸೆಂಬರ್ 2019ಕ್ಕೆ ಇದ್ದಂತೆ | ಹೆಚ್ಚಳ (ರೂ) | ಶೇ. |
|---|---|---|---|---|---|
| 1 | ಠೇವಣಿ | ರೂ.183 ಕೋಟಿ | ರೂ.226 ಕೋಟಿ | ರೂ.43 ಕೋಟಿ | 19% |
| 2 | ಸಾಲ ಮತ್ತು ಮುಂಗಡ | ರೂ.148 ಕೋಟಿ | ರೂ.184 ಕೋಟಿ | ರೂ.36 ಕೋಟಿ | 20% |
| 3 | ಒಟ್ಟು ವ್ಯವಹಾರ | ರೂ.331 ಕೋಟಿ | ರೂ.410 ಕೋಟಿ | ರೂ.79 ಕೋಟಿ | 19% |
| 4 | ನಿವ್ವಳ ಲಾಭ | ರೂ.3.06 ಕೋಟಿ | ರೂ.3.58 ಕೋಟಿ | ರೂ.52 ಲಕ್ಷ | 14% |
| 5 | ಅನುತ್ಪಾದಕ ಆಸ್ತಿ (Absolute) | ರೂ.35 ಲಕ್ಷ | ರೂ.35 ಲಕ್ಷ | – | – |
| | ಶೇಕಡಾವಾರು | 0.24% | 0.19% | – | – |
| 6 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | – | – |

2019-20ನೇ ಸಾಲಿನ 3ನೇ ತ್ರೈಮಾಸಿಕ ಅವಧಿಯಲ್ಲಿ, ಸಂಘವು ತನ್ನ ಎಲ್ಲಾ ಕಾರ್ಯಕ್ಷೇತ್ರದಲ್ಲಿ ಬಹಳ ಉತ್ತಮ ಪ್ರಗತಿಯನ್ನು ಹೊಂದಿ, ಬಹಳಷ್ಟು ಸುದೃಢವಾಗಿ ಬೆಳೆದಿದೆ ಎಂದು ತಿಳಿಸಲು ತುಂಬಾ ಸಂತೋಷಪಡುತ್ತೇನೆ.

2015ಕ್ಕೆ ಪ್ರಸ್ತುತ ಆಡಳಿತ ಮಂಡಳಿಯು ನನ್ನ ಅಧ್ಯಕ್ಷತೆಯಲ್ಲಿ ಅಧಿಕಾರ ವಹಿಸಿಕೊಂಡಾಗ, ಮುಂದಿನ 5 ವರ್ಷಗಳ ಕಾಲಾವಧಿಗೆ (31.03.2020) ಈ ಕೆಳಗಿನ ಕಾರ್ಯಯೋಜನೆಗಳನ್ನು ಹಮ್ಮಿಕೊಂಡಿರುವುದು.

| ಕ್ರ. ಸಂ. | ಕಾರ್ಯ ವಿಭಾಗ | 31.03.2020ಕ್ಕೆ ನಿಗದಿಪಡಿಸಿದ ಗುರಿ | 31.12.2019ಕ್ಕೆ ಇದ್ದಂತೆ | ಷರಾ |
|---|---|---|---|---|
| 1 | ಠೇವಣಾತಿಗಳು | ರೂ.215 ಕೋಟಿ | ರೂ.226 ಕೋಟಿ | 31.03.2020ರ ಗುರಿಯನ್ನು 31.12.2019ಕ್ಕೆ ತಲುಪಿರುವುದು. |
| 2 | ಸಾಲ ಮತ್ತು ಮುಂಗಡ | ರೂ.185 ಕೋಟಿ | ರೂ.184 ಕೋಟಿ | ಅತೀ ಶೀಘ್ರದಲ್ಲಿ ಗುರಿಯನ್ನು ತಲುಪುವುದು. |
| 3 | ಒಟ್ಟು ವ್ಯವಹಾರ | ರೂ.400 ಕೋಟಿ | ರೂ.410 ಕೋಟಿ | 31.03.2020ರ ಗುರಿಯನ್ನು 31.12.2019ಕ್ಕೆ ತಲುಪಿರುವುದು. |
| 4 | ನಿವ್ವಳ ಲಾಭ | ರೂ.5 ಕೋಟಿ | 31.03.2019ಕ್ಕೆ ರೂ.5.78 ಕೋಟಿ | 31.03.2020ರ ಗುರಿಯನ್ನು 31.03.2019ರಲ್ಲಿ ತಲುಪಿರುವುದು. |
| 5 | ನಿವ್ವಳ ಅನುತ್ಪಾದಕ ಆಸ್ತಿ | 0% | 0% | – |

**31.03.2020ರ ಗುರಿಯನ್ನು 31.12.2019ಕ್ಕೆ ದಾಟಿದ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ:**

2019-20ನೇ ಆರ್ಥಿಕ ವರ್ಷಕ್ಕೆ ಗುರಿಯಾಗಿಸಿಕೊಂಡಿದ್ದ 400 ಕೋಟಿ ರೂ. ವ್ಯವಹಾರದ ಮೈಲುಗಲ್ಲನ್ನುಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಯಶಸ್ವಿಯಾಗಿ ದಾಟಿ, 31.12.2019ಕ್ಕೆ ರೂ.410 ಕೋಟಿ ವ್ಯವಹಾರವನ್ನು ದಾಖಲಿಸಿದೆ.

ಸಂಘದ ಈ ಸಾಧನೆಗೆ ಎಲ್ಲಾ ನಿರ್ದೇಶಕರುಗಳ, ಸಿಬ್ಬಂದಿಗಳ ಸಹಕಾರವಿದೆ. ವಾರ್ಷಿಕ ಗುರಿಯನ್ನು ಸಮಯಕ್ಕಿಂತ ಮುಂಚೆಯೇ ಸಾಧಿಸಿದ್ದೇವೆ. ಇದು ಸದಸ್ಯರು ನಮ್ಮ ಮೇಲೆ ತೋರಿಸಿರುವ ನಂಬಿಕೆಗೆ ಸಾಕ್ಷಿಯಾಗಿದೆ.

## 01.04.2015 ರಿಂದ 31.12.2019ರ ವರೆಗೆ ಸಂಘವು ಸಾಧಿಸಿರುವ ಪ್ರಗತಿಯ ಪಕ್ಷಿನೋಟ

| ವರ್ಷ | ಸದಸ್ಯರ ಸಂಖ್ಯೆ | ಪಾಲು ಬಂಡವಾಳ | ಠೇವಣಿ | ಸಾಲಗಳು | ದುಡಿಯುವ ಬಂಡವಾಳ | ನಿವ್ವಳ ಲಾಭ | ಡಿವಿಡೆಂಟ್ | ಅನುತ್ಪಾದಕ ಆಸ್ತಿ | |
|---|---|---|---|---|---|---|---|---|---|
| | | | | | | | | Gross | Net |
| 31.03.2015 | 43976 | 344 | 11832 | 8639 | 13441 | 281 | 20% | 0.13% | 0% |
| 31.03.2016 | 47672 | 440 | 12709 | 9481 | 14624 | 385 | 22% | 0.15% | 0% |
| 31.03.2017 | 51377 | 544 | 13355 | 10754 | 15683 | 403 | 23% | 0.15% | 0% |
| 31.03.2018 | 55756 | 631 | 16048 | 12843 | 18727 | 471 | 23% | 0.12% | 0% |
| 31.03.2019 | 61457 | 676 | 19351 | 15884 | 22470 | 578 | 25% | 0.10% | 0% |
| 31.12.2019 | 65466 | 706 | 22556 | 18420 | 25997 | 358 | – | – | 0% |

**01.04.2015ರಿಂದ 31.12.2019ರವರೆಗಿನ ಸಾಧನೆ :**

1. ಠೇವಣಾತಿಯಲ್ಲಿ ರೂ.107 ಕೋಟಿ ಹೆಚ್ಚಳ (91% ವೃದ್ಧಿ).
2. ಸಾಲ ಮತ್ತು ಮುಂಗಡದಲ್ಲಿ ರೂ.98 ಕೋಟಿ ಹೆಚ್ಚಳ (97% ವೃದ್ಧಿ)
3. ಒಟ್ಟು ವ್ಯವಹಾರದಲ್ಲಿ ರೂ.205 ಕೋಟಿ ಹೆಚ್ಚಳ (100% ವೃದ್ಧಿ)
4. ನಿವ್ವಳ ಲಾಭದಲ್ಲಿ ರೂ.2.97 ಕೋಟಿ ಹೆಚ್ಚಳ (31.03.2015 ರೂ.2.81 ಕೋಟಿ, 31.03.2019ಕ್ಕೆ ರೂ.5.78 ಕೋಟಿ)
5. ನಿವ್ವಳ ಅನುತ್ಪಾದಕ ಆಸ್ತಿ 0%.
6. 2014–15 ಸಾಲಿಗೆ 20% ಡಿವಿಡೆಂಡ್, 2018–19ಕ್ಕೆ 25% ಡಿವಿಡೆಂಡ್.
7. 4 ಹೊಸ ಶಾಖೆಗಳು. ಒಟ್ಟು ಶಾಖೆಗಳ ಸಂಖ್ಯೆ 20 (ಈಗಾಗಲೇ ಇನ್ನು ಹೊಸ 5 ಶಾಖೆಗಳ ಅನುಮತಿಗಾಗಿ ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ).
8. ಸಂಘಕ್ಕೆ ಮಂಗಳೂರಿನ ಹೃದಯ ಭಾಗದಲ್ಲಿ 0.20 ಸೆಂಟ್ಸ್ ಜಾಗ ಖರೀದಿ ಹಾಗೂ ಕೇಂದ್ರ ಕಛೇರಿ ಕಟ್ಟಡಕ್ಕೆ ಶಂಕು ಸ್ಥಾಪನೆ.
9. 04 ಹಳೆಯ ಶಾಖೆಗಳ ನವೀಕರಣದೊಂದಿಗೆ, 8 ಶಾಖೆಗಳಿಗೆ ಹವಾನಿಯಂತ್ರಣ ವ್ಯವಸ್ಥೆ ಅಳವಡಿಕೆ.
10. ಸದಸ್ಯರ ಗ್ರಾಹಕರಿಗೆ ಇನ್ನೂ ಹೆಚ್ಚಿನ ಸೇವೆಗಳನ್ನು ತ್ವರಿತವಾಗಿ ನೀಡುವಂತಾಗಲು ನೂತನ ತಂತ್ರಜ್ಞಾನಗಳ ಅಳವಡಿಕೆ.
11. 29 ಮಂದಿ ಹೊಸ ಸಿಬ್ಬಂದಿಗಳ ನೇಮಕಾತಿ.
12. 2015–16 ಸಾಲಿಗಿಂತ 2018–19, ಸಾಲಿನವರೆಗೆ ನಿರಂತರವಾಗಿ 4 ಬಾರಿ ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನಿಂದ "ಸಾಧನಾ ಪ್ರಶಸ್ತಿ".
13. ಅಖಿಲ ಭಾರತ ಸಹಕಾರ ಸಪ್ತಾಹ 2016ರ ಸಮಾರಂಭದಲ್ಲಿ ಸಹಕಾರಿ ಇಲಾಖೆಯಿಂದ ಸಂಘಕ್ಕೆ ರಾಜ್ಯಮಟ್ಟದ "ಅತ್ಯುತ್ತಮ ಸಹಕಾರ ಸಂಘ" ಪ್ರಶಸ್ತಿ.
14. 2019ನೇ ಸಾಲು ಸಂಘದ ಸ್ಥಾಪನೆ 25ನೇ ವರ್ಷ. 14.12.2019ರಂದು ಬೆಳ್ಳಿಹಬ್ಬದ ವರ್ಷಾಚರಣೆಯ ಸಮಾರಂಭವನ್ನು ಗಣ್ಯಾತಿಗಣ್ಯರ ಉಪಸ್ಥಿತಿಯಲ್ಲಿ ಯಶಸ್ವಿಯಾಗಿ ಆಚರಿಸಲಾಯಿತು.

**ಮುಂದಿನ 5 ವರ್ಷದ ಗುರಿ**

31.12.2019ರಲ್ಲಿರುವ ರೂ.410 ಕೋಟಿ ವ್ಯವಹಾರವನ್ನು ಮುಂದಿನ ಐದು ವರ್ಷದ ಅವಧಿಯಲ್ಲಿ ವೃದ್ಧಿಗೊಳಿಸಿ 31.03.2025ಕ್ಕೆ ರೂ.1000 ಕೋಟಿ ತಲುಪುವುದು ಹಾಗೂ ಸದಸ್ಯರಿಗೆ ನಿರಂತರವಾಗಿ 25% ಡಿವಿಡೆಂಡ್ ನೀಡುವುದು.

**ದಿನಾಂಕ 14.12.2019ರಂದು ಜರಗಿದ ಸಂಘದ ಬೆಳ್ಳಿಹಬ್ಬದ ವರ್ಷಾಚರಣೆ ಸಮಾರಂಭ :**



1994ರಲ್ಲಿ ದಿ| ಶ್ರೀ ಕೆ.ಬಿ. ಜಯಪಾಲ ಶೆಟ್ಟಿ ಹಾಗೂ ಅವರೊಡನೆ ಕೈ ಜೋಡಿಸಿದ ಸ್ಥಾಪಕ ನಿರ್ದೇಶಕರುಗಳಿಂದ ಅಸ್ತಿತ್ವಕ್ಕೆ ಬಂದ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿ ಲಿ. ಸ್ಥಾಪನೆಗೊಂಡ 25 ವರ್ಷಗಳಲ್ಲಿ ಸರ್ವತೋಮುಖ ಪ್ರಗತಿಯನ್ನು ಸಾಧಿಸಿ, ರಾಜ್ಯದ ಅಗ್ರಗಣ್ಯ ಕ್ರೆಡಿಟ್ ಸಹಕಾರ ಸಂಘಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. 2019ನೇ ಸಾಲಿನ ಸಂಘದ ಬೆಳ್ಳಿಹಬ್ಬ ಸಂಭ್ರಮಾಚರಣೆಯ ವರ್ಷ. ಈ ಸಂತಸವನ್ನು ಎಲ್ಲರೊಡನೆ ಹಂಚಿಕೊಳ್ಳಲು ದಿನಾಂಕ 14.12.2019ರಂದು ಗಣ್ಯರ ಹಾಗೂ ಸಂಘದ ನಿರ್ದೇಶಕ ಮಂಡಳಿ ಮತ್ತು ಸುಮಾರು 1500ಗಿಂತ ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದ ಸದಸ್ಯರು, ಗ್ರಾಹಕರು, ಹಿತೈಷಿಗಳು, ಸಿಬ್ಬಂದಿಗಳ ಸಮಕ್ಷಮದಲ್ಲಿ ಕರ್ನಾಟಕ ಸರಕಾರದ ಮುಜರಾಯಿ, ಮೀನುಗಾರಿಕೆ, ಬಂದರು ಮತ್ತು ಒಳನಾಡಿನ ಜಲಸಾರಿಗೆ ಇಲಾಖೆ ಸಚಿವರು ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಯವರು ದೀಪ ಬೆಳಗಿಸಿ ಉದ್ಘಾಟಿಸಿದರು.

ತನ್ನ ಉದ್ಘಾಟನಾ ಭಾಷಣದಲ್ಲಿ ಸಚಿವರು, 25 ವರ್ಷಗಳಲ್ಲಿ ಸಹಕಾರಿ ಕ್ಷೇತ್ರದಲ್ಲಿ ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿಯು ಒಂದು ಗುರುತು ಉಳಿಯುವಂತಹ ಸಾಧನೆಯನ್ನು ಮಾಡಿದೆ, ಅನ್ನೋದನ್ನ ಸಮಾಜ ಮತ್ತು ಸರ್ಕಾರ ಗೌರವಿಸಬೇಕು ಎಂದು ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿಯ ಉನ್ನತಿಗೋಸ್ಕರ ಶುಭ ಹಾರೈಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಎಸ್.ಸಿ. ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಾದ ಡಾ। ಎಂ.ಎನ್. ರಾಜೇಂದ್ರ ಕುಮಾರ್‌ರವರು ಶ್ರೀ ರಾಮಕೃಷ್ಣ ಸೊಸೈಟಿಯು ದಿವಂಗತ ಕೆ.ಬಿ. ಜಯಪಾಲ ಶೆಟ್ಟಿಯವರಿಂದ ಶುಭಾರಂಭಗೊಂಡು, ಎಲ್ಲರ ಸಹಕಾರದಿಂದ ಭದ್ರ ಬುನಾದಿ ತಳಪಾಯದಿಂದ ಬೆಳೆದು, ಕೆ.ಜೈರಾಜ್ ಬಿ. ರೈಯವರ ಅಧ್ಯಕ್ಷತೆಯಲ್ಲಿ ರೂ.220 ಕೋಟಿ ಠೇವಣಾತಿ, ರೂ.180 ಕೋಟಿ ಹೊರಬಾಕಿ ಸಾಲ, ರೂ.400 ಕೋಟಿಗಿಂತಲೂ ಹೆಚ್ಚಿನ ವ್ಯವಹಾರ ಮಾಡಿ ಹೆಮ್ಮರವಾಗಿ ಬೆಳೆದು, ಶೇ.25ರಷ್ಟು ಡಿವಿಡೆಂಡ್ ನೀಡುತ್ತದೆ ಎಂದರೆ ಸಂಘ ಸುಭದ್ರವಾಗಿದೆ ಎಂದೇ ಅರ್ಥ ಎಂದು ಕಾರ್ಯಕ್ರಮಕ್ಕೆ ಶುಭಕೋರಿದರು.

ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ತನ್ನ ಪ್ರಾಸ್ತಾವಿಕ ಭಾಷಣದಲ್ಲಿ ಸಂಸ್ಥೆಯು ಉಭಯ ಜಿಲ್ಲೆಯಲ್ಲಿ 65 ಸಾವಿರಕ್ಕೂ ಹೆಚ್ಚು ಸದಸ್ಯರನ್ನು ಹೊಂದಿ, ಪ್ರಸ್ತುತ 20 ಶಾಖೆಗಳೊಂದಿಗೆ, ರೂ.220 ಕೋಟಿ ಠೇವಣಿ, ರೂ.180 ಕೋಟಿ ಹೊರಬಾಕಿ ಸಾಲವನ್ನು ಹೊಂದಿ, ಒಟ್ಟು ರೂ.400 ಕೋಟಿ ವ್ಯವಹಾರ ದಾಖಲಿಸಿ ರಾಜ್ಯದ ಅಗ್ರಗಣ್ಯ ಕ್ರೆಡಿಟ್ ಸಹಕಾರ ಸಂಘಗಳಲ್ಲಿ ಒಂದಾಗಿ ಗುರುತಿಸಿಕೊಂಡಿದೆ. 2019ರ ಮಾರ್ಚ್ 31ಕ್ಕೆ ರೂ.5.78 ಕೋಟಿ ನಿವ್ವಳ ಲಾಭ ಗಳಿಸಿ, ಸದಸ್ಯರಿಗೆ 2018-19ನೇ ಸಾಲಿನಲ್ಲಿ ಶೇ.25 ಡಿವಿಡೆಂಡ್ ವಿತರಿಸಿದೆ ಎಂದರು. ಈ ಎಲ್ಲಾ ಪ್ರಗತಿಗೆ ಕಾರಣ, ಸಂಘದ ಆಡಳಿತ ಮಂಡಳಿಯ ಒಗ್ಗಟ್ಟು ಮತ್ತು ಮಾರ್ಗದರ್ಶನ, ಸಂಘದ ಎಲ್ಲಾ ಸದಸ್ಯರುಗಳು, ಮುಖ್ಯವಾಗಿ ಠೇವಣಿ ಹಾಗೂ ಸಾಲಗಾರ ಸದಸ್ಯರು ನಮಗೆ ಕೊಟ್ಟಿರುವಂಥಹ ಸಹಕಾರ, ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಸಿಬ್ಬಂದಿ ಗಳು ಈ ಸಂಸ್ಥೆಗೋಸ್ಕರ ಪ್ರಾಮಾಣಿಕವಾಗಿ ಶ್ರಮಿಸುತ್ತಿರುವ ರೀತಿ ಎಂದು ತಿಳಿಸಿ ಅವರೆಲ್ಲರಿಗೂ ಹೃತ್ಪೂರ್ವಕ ಧನ್ಯವಾದ ಅರ್ಪಿಸಿ, ಮುಂದಿನ ಐದು ವರ್ಷಗಳಲ್ಲಿ ರೂ.1000 ಕೋಟಿ ವ್ಯವಹಾರವನ್ನು ತಲುಪುತ್ತೇವೆ ಎಂದು ತಿಳಿಸಿದರು.

ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿಯವರು ಸಂಘವು ಉತ್ತರೋತ್ತರ ಅಭಿವೃದ್ಧಿಯನ್ನು ಕಾಣಲಿ ಎಂದು ಶುಭ ಹಾರೈಸಿದರು.

ಸಂಘದ ಸ್ಥಾಪಕಾಧ್ಯಕ್ಷ ದಿ। ಕೆ.ಬಿ. ಜಯಪಾಲ ಶೆಟ್ಟಿ, ಸಂಘದ ಪ್ರವರ್ತಕರಾಗಿ ಹಾಗೂ ಮಾಜಿ ನಿರ್ದೇಶಕರುಗಳಾಗಿ ಸೇವೆ ಸಲ್ಲಿಸಿ ಗತಿಸಿದ ಮಹನೀಯರುಗಳ ಸಂಸ್ಮರಣೆಯನ್ನು ಮಾಡಲಾಯಿತು. ಸಮಾರಂಭದಲ್ಲಿ ಸಂಘದ ಸ್ಥಾಪನಾ ದಿನದಿಂದ ಇದುವರೆಗೆ ನಿರ್ದೇಶಕರಾಗಿರುವ ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ, ಸಂಘದ ಸ್ಥಾಪಕ ಪ್ರವರ್ತಕ ನಿರ್ದೇಶಕರುಗಳಾಗಿದ್ದ ಡಾ। ಡಿ.ಸಿ.ಚೌಟ, ಜ್ಯೋತಿಪ್ರಸಾದ್ ಹೆಗ್ಡೆ, ಪಿ.ರಮಾನಾಥ ಹೆಗ್ಡೆ, ಸಂಘದ ಮಾಜಿ ನಿರ್ದೇಶಕರಾದ ಯು. ತಾರನಾಥ ಆಳ್ವ, ಶಂಕರ್‌ಮೋಹನ್ ಪೂಂಜಾ ಮತ್ತು ಮನೋಹರ್ ಎಸ್. ಶೆಟ್ಟಿ, ಸಂಘದ ಅತೀ ಹಿರಿಯ ಸಿಬ್ಬಂದಿಗಳಾದ ಉಷಾ ಎಂ. ಶೆಟ್ಟಿ, ಎಸ್. ಅಮರನಾಥ ಹೆಗ್ಡೆ ಇವರುಗಳನ್ನು ಸನ್ಮಾನಿಸಲಾಯಿತು. ಅಲ್ಲದೆ ಸಂಘದ ಸೇವೆಯಿಂದ ವಯೋ ನಿವೃತ್ತಿ ಹೊಂದಿದ ಸಿಬ್ಬಂದಿಗಳಾದ ಶೀನ ಗೌಡ ಮತ್ತು ರಾಜು ಶೆಟ್ಟಿಯವರನ್ನು ಗೌರವಿಸಲಾಯಿತು.

ಬೆಳ್ಳಿಹಬ್ಬ ಸಂಭ್ರಮದ ಕಿರು ಹೊತ್ತಗೆ "ಸಂಘವು ನಡೆದು ಬಂದ ದಾರಿ" ಮತ್ತು ಸಾಕ್ಷ್ಯಚಿತ್ರವನ್ನು ಬಿಡುಗಡೆಗೊಳಿಸಿ ಮಾತನಾಡಿದ, ಮಾಜಿ ಸಚಿವ ಬಿ. ರಮಾನಾಥ ರೈರವರು 25 ವರ್ಷಗಳ ಹಿಂದೆ ಈ ಸಂಘವು ನನ್ನ ಕೈಯಿಂದ ಉದ್ಘಾಟನೆ ಹೊಂದಿ, 25 ವರ್ಷಗಳ ನಂತರ ನಾನು ಈ ಸಂಘದ ಬೆಳ್ಳಿಹಬ್ಬದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೇನೆ ಎನ್ನುವುದು ನನಗೆ ತುಂಬಾ ಸಂತೋಷದ ವಿಷಯ. ಈ ಸಂಘವು ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದು ನಾನು ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ ಎಂದು ಸಂಘಕ್ಕೆ ಶುಭ ಹಾರೈಸಿದರು.

ಮುಖ್ಯ ಅತಿಥಿಗಳಾದ ತೇಜಸ್ವಿನಿ ಆಸ್ಪತ್ರೆ ಹಾಗೂ ಸಮೂಹ ಸಂಸ್ಥೆಯ ಸ್ಥಾಪಕಾಧ್ಯಕ್ಷ ಡಾ। ಎಂ. ಶಾಂತಾರಾಮ್ ಶೆಟ್ಟಿ, ಜಾಗತಿಕ ಬಂಟ ಸಂಘಗಳ ಒಕ್ಕೂಟದ ಅಧ್ಯಕ್ಷರಾದ ಐಕಳ ಹರೀಶ್ ಶೆಟ್ಟಿ, ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಪ್ರಕಾಶ್‌ರಾವ್, ಸಹಕಾರ ಸಂಘಗಳ ಉಪನಿಬಂಧಕರಾದ ಪ್ರವೀಣ್ ಬಿ. ನಾಯಕ್‌ರವರು, ಸದಸ್ಯರಿಗೆ ಮತ್ತು ವಿಶೇಷವಾಗಿ ಈ ಸಂಘವನ್ನು ಹುಟ್ಟು ಹಾಕಿದ ಪಿತಾಮಹರಿಗೆ, ಸಂಘದ ಎಲ್ಲಾ ನಿರ್ದೇಶಕರುಗಳಿಗೆ ಹಾಗೂ ಎಲ್ಲಾ ಸಿಬ್ಬಂದಿಗಳಿಗೆ ಬೆಳ್ಳಿಹಬ್ಬದ ಶುಭಾಶಯಗಳನ್ನು ಸಲ್ಲಿಸಿ, ಇಡೀ ಕರ್ನಾಟಕ ರಾಜ್ಯದಾದ್ಯಂತ ಆದರ್ಶಪ್ರಾಯವಾದಂತಹ ಮಿನಿಬ್ಯಾಂಕ್ ಆಗಿ, ಬ್ಯಾಂಕಿಂಗ್ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸುವಂತಾಗಲಿ ಎಂದು ಶುಭ ಹಾರೈಸಿದರು.

ನಿರ್ದೇಶಕರಾದ ಸವಣೂರು ಸೀತಾರಾಮ ರೈಯವರು ಸ್ವಾಗತಿಸಿ, ಪಿ.ಬಿ. ದಿವಾಕರ ರೈಯವರ ವಂದನೆಯೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

## ಕೇಂದ್ರ ಕಛೇರಿ ಕಟ್ಟಡಕ್ಕೆ ಶಂಕು ಸ್ಥಾಪನೆ




**ದಿನಾಂಕ 11.12.2019ನೇ ಶುಭದಿನದಂದು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ಯವರು, ಎಲ್ಲಾ ನಿರ್ದೇಶಕರು ಹಾಗೂ ಸಿಬ್ಬಂದಿಗಳ ಸಮಕ್ಷಮದಲ್ಲಿ ಕೇಂದ್ರ ಕಛೇರಿ ಕಟ್ಟಡಕ್ಕೆ ಶಿಲಾನ್ಯಾಸವನ್ನು ನೆರವೇರಿಸಿದರು.**

ಈ ಎಲ್ಲಾ ಸಂತೋಷದ ವಿಚಾರವನ್ನು ತಮ್ಮಲ್ಲಿ ಹಂಚಿಕೊಳ್ಳುತ್ತಾ, ಮುಂದಿನ ದಿನಗಳಲ್ಲೂ ಕೂಡ ನಿಮ್ಮೆ ಲ್ಲರ ಸಹಕಾರವನ್ನು ಅಪೇಕ್ಷಿಸಿ, ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ದಿನದಿಂದ ದಿನಕ್ಕೆ ಅಭಿವೃದ್ಧಿ ಯಾಗಿ, ಸದಸ್ಯರಿಗೆ, ಸಮಾಜಕ್ಕೆ, ಒಳ್ಳೆಯ ಸೇವೆಯನ್ನು ನೀಡಿ 31.03.2025ಕ್ಕೆ ರೂ.1000 ಕೋಟಿ ಮೀರಿದ ವ್ಯವಹಾರವನ್ನು ಸಾಧಿಸಿ, ರಾಜ್ಯದ ಅತ್ಯುತ್ತಮ ಸಹಕಾರ ಸಂಘ ಪ್ರಶಸ್ತಿ ಮಾತ್ರವಲ್ಲ ರಾಷ್ಟ್ರೀಯ ಮಟ್ಟದ ಪ್ರಶಸ್ತಿಗೆ ಕೂಡ ಅರ್ಹವಾಗಿ ದೇಶದ ಅತ್ಯುತ್ತಮ ಸಹಕಾರಿ ಸಂಘಗಳಲ್ಲೊಂದು ಎಂದು ಗುರುತಿಸಲ್ಪಡಲಿ ಎಂದು ಹಾರೈಸುತ್ತೇನೆ.

**ಕೆ. ಜೈರಾಜ್ ಬಿ. ರೈ, ಅಧ್ಯಕ್ಷರು**

## ಅಭಿನಂದನೆಗಳು



ಬಂಟರ ಯಾನೆ ನಾಡವರ ಮಾತೃ ಸಂಘದ ಅಧ್ಯಕ್ಷರಾಗಿ ಪುನರಾಯ್ಕೆಯಾದ ಮಾಲಾಡಿ ಶ್ರೀ ಅಜಿತ್‌ಕುಮಾರ್ ರೈ ಯವರನ್ನು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಯವರು ಅಭಿನಂದಿಸಿದರು.

### ಗದಗ ಜಿಲ್ಲಾ ಸಹಕಾರ ಯೂನಿಯನ್ ಇದರ ಆಡಳಿತ ಮಂಡಳಿ ಪ್ರತಿನಿಧಿಗಳು ಸಂಘಕ್ಕೆ ಅಧ್ಯಯನ ಭೇಟಿ



ದಿನಾಂಕ 16.10.2019ರಂದು ಗದಗ ಜಿಲ್ಲಾ ಸಹಕಾರ ಯೂನಿಯನ್‌ನ ಆಡಳಿತ ಮಂಡಳಿಯ ನಿರ್ದೇಶಕರುಗಳು ಸಂಘಕ್ಕೆ ಅಧ್ಯಯನ ಭೇಟಿ ನೀಡಿದಾಗ, ಸಂಘದ ಅಧ್ಯಕ್ಷರು ಅವರನ್ನು ಹೂಗುಚ್ಛ ನೀಡಿ ಹೃತ್ಪೂರ್ವಕವಾಗಿ ಸ್ವಾಗತಿಸಿದರು.



ನೂತನ ಅಧಿಕಾರ ಸ್ವೀಕರಿಸಿದ ಮೈಸೂರು ಪ್ರಾಂತ್ಯದ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಪ್ರಕಾಶ್‌ರಾವ್‌ರವರನು ,ಕೆಸಿಎಸ್, ಇವರನ್ನು ಸಂಘದಅಧ್ಯಕ್ಷರು ದಿನಾಂಕ 29.11.2019ರಂದು ಭೇಟಿ ನೀಡಿ ಅಭಿನಂದಿಸಿದರು



ಹೊಸದಾಗಿ ಅಧಿಕಾರ ಸ್ವೀಕರಿಸಿದ ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಪ್ರವೀಣ್ ಬಿ. ನಾಯಕ್, ಕೆಸಿಎಸ್, ಇವರನ್ನು ಸಂಘದ ಅಧ್ಯಕ್ಷರು ದಿನಾಂಕ 30.10.2019ರಂದು ಭೇಟಿ ನೀಡಿ ಅಭಿನಂದಿಸಿದರು.

## ಹುಟ್ಟು ಹಬ್ಬದ ಶುಭಾಶಯಗಳು

| ಸಿಬ್ಬಂದಿಗಳ ಹೆಸರು ಮತ್ತು ಶಾಖೆ | |
|---|---|
| ಶ್ರೀಮತಿ ಹರಿಣಿ ರೈ ಬಿ. , ಸುಳ್ಯ | ಶ್ರೀ ವಿನಯ ಕುಮಾರ್ ಶೆಟ್ಟಿ, ಹೆಬ್ರಿ |
| ಕು. ಸಪ್ತಮಿ ಎಸ್. ರೈ, ಪುತ್ತೂರು | ಶ್ರೀ ರೋಹಿತ್ ಎಂ.ಜೆ., ಉಪ್ಪಿನಂಗಡಿ |
| ಶ್ರೀಮತಿ ವೀಣಾ ಶೆಟ್ಟಿ, ವಿಟ್ಲ | ಕು. ರಮ್ಯ, ಬೈಂದೂರು |
| ಶ್ರೀ ಗೋಪಾಲಕೃಷ್ಣ ಪಿ., ತೊಕ್ಕೊಟ್ಟು | ಶ್ರೀ ರಮೇಶ್ ಕೆ., ಮುಲ್ಕಿ |
| ಶ್ರೀ ಧನಂಜಯ ಶೆಟ್ಟಿಗಾರ್, ಕುಂದಾಪುರ | ಶ್ರೀ ಪಾಂಡುರಂಗ ನ್ಯಾಕ್, ಹೆಬ್ರಿ |
| ಕು. ರಾಧಿಕ ಎಂ., ಸುಳ್ಯ | ಶ್ರೀ ನಿತೇಶ್ ಕುಮಾರ್, ಮಂಗಳೂರು |
| ಶ್ರೀ ಹರೀಶ್, ಕೇಂದ್ರ ಕಛೇರಿ | |

## ಅಭಿನಂದನೆಗಳು

- ಸಂಘದ ಕೇಂದ್ರ ಕಛೇರಿ ಸಿಬ್ಬಂದಿ ಕು. ಅಶ್ವಿನಿ ಡಿ. ರೈಯವರ ನಿಶ್ಚಿತಾರ್ಥವು ಸಹನ್ ಶೆಟ್ಟಿರವರೊಂದಿಗೆ ಇತ್ತೀಚೆಗೆ ಜರಗಿತು. ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.
- ಸಂಘದ ಹಂಪನಕಟ್ಟೆ ಶಾಖೆಯ ಸಿಬ್ಬಂದಿ ಕು. ಅಕ್ಷತಾರವರು ವಿವಾಹವು ಚಿ। ಚೇತನ್‌ರವರೊಂದಿಗೆ ಇತ್ತೀಚೆಗೆ ಜರಗಿತು. ವೈವಾಹಿಕ ಜೀವನಕ್ಕೆ ಕಾಲಿಟ್ಟ ನವ ವಧೂ–ವರರಿಗೆ ಹೃತ್ಪೂರ್ವಕ ಅಭಿನಂದನೆಗಳು.

Private Circulation only

**BOOK-POST**

**To,**

If not delivered please return to :

**SRI RAMAKRISHNA CREDIT CO-OP. SOCIETY LTD.**

2nd Floor, Amruthotsava Building, Bunts Hostel Circle, Mangalore - 575 003.